**<u>ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮುಂಡಗೋಡ.</u>**

**<u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 56/2025</u>**

**ಫಿರ್ಯಾದುದಾರರು:**

ಯು.ಕೆ.ಸೌಹಾರ್ದ ಕ್ರೆಡಿಟ್
ಕೋಂ-ಆಪ್ ಲಿ. ಮುಂಡಗೋಡ

**- ವಿರುದ್ಧ -**

**ಆರೋಪಿತರು:**

ಯೇಸುದಾಸ್ ನರಸಯ್ಯ ಗುರುನಾಲ್ ತಂದೆ
ನರಸಯ್ಯ ಗುರುನಾಲ್, ಸಾ: ಸಂಗೂಳ್ಳಿ ರಾಯಣ್ಣ ರಸ್ತೆ,
ಮುಂಡಗೋಡ -581349.

**<u>ಆಪಾದನೆ.</u>**

ಆರೋಪಿತರಾದ ನೀವು ಫಿರ್ಯಾಧಿದಾರರ ಸಹಕಾರಿ ಸಂಘದಲ್ಲಿ ರೂ.3,96,000/-ಗಳನ್ನು ಸಾಲವಾಗಿ ದಿನಾಂಕ 03/10/2023 ರಂದು ಸಾಲದ ಖಾತೆ ಸಂಖ್ಯೇ 45-00901000119 ರ ಮುಖಾಂತರ ಪಡೆದಿದ್ದು, ಸದ್ರಿ ಸಾಲವನ್ನು ನಿಗಧಿತ ಸಮಯಕ್ಕೆ ಮರುಪಾವತಿ ಮಾಡುವುದಾಗಿ ಒಪ್ಪಿ ನೀವು ಪಡೆದ ಸಾಲಕ್ಕೆ ಸಂಘದ ಸಾಲ ಪತ್ರದ ಕರಾರಿಗೆ ಒಳಪಟ್ಟು ಸಹಿಯನ್ನು ಮಾಡಿರುತ್ತೀರಿ. ತದನಂತರ ನೀವು ನಿಗಧಿತ ಸಮಯಕ್ಕೆ ಸದ್ರಿ ಹಣವನ್ನು ಮರು ಪಾವತಿ ಮಾಡದೇ, ಕಾಲಹರಣವನ್ನು ಮಾಡಿ ಸಮಯವನ್ನು ದೂರುತ್ತಾ ಬಂದಿರುತ್ತೀರಿ, ಕೊನೆಗೆ ಸದ್ರಿ ಸಾಲದ ಹಣವನ್ನು ಮರು ಪಾವತಿ ಮಾಡುತ್ತೇನೆಂದು ತಿಳಿಸಿ ಫಿರ್ಯಾದಿ ಶಾಖೆಗೆ ಡಿಸೆಂಬರ್ ಎರಡನೇ ವಾರದಂದು ನಗದೀಕರಣಕ್ಕಾಗಿ ಸ್ಟೇಟ್ ಬ್ಯಾಂಕ ಆಫ್ ಇಂಡಿಯಾ ಮುಂಡಗೋಡ ಶಾಖೆಯಲ್ಲಿ ನಿಮಗೆ ಸೇರಿದ ಚೆಕ್ **ನಂ.190649, ಒಟ್ಟು ರೂ.3,77,660/-ಗಳ ಮೊತ್ತಕ್ಕೆ ಚೆಕನ್ನು** ದಿನಾಂಕ 12/12/2024 ಎಂದು ನಮೂದಿಸಿ ನೀಡಿರುತ್ತೀರಿ, ತದನಂತರ ತಮ್ಮ ಭರವಸೆಯ ಮೇರೆಗೆ ಫಿರ್ಯಾದಿದಾರರ ಸಂಘವು ದಿನಾಂಕ 12/12/2024 ರಂದು ಸದ್ರಿ ಚೆಕ್ಕನ್ನು ಸ್ಟೆಟ ಬ್ಯಾಂಕ ಆಫ್ ಇಂಡಿಯಾ ಮುಂಡಗೋಡ ಶಾಖೆಗೆ ನಗಧೀಕರಣಕ್ಕಾಗಿ ಚೆಕ್ಕನ್ನು ಹಾಜರಪಡಿಸಿದಾಗ, ನಿಮ್ಮ ಖಾತೆಯಲ್ಲಿ "**funds insufficient**" ಎಂದು ದಿನಾಂಕಃ 12/12/2024 ರಂದು ಮೇಮೋ ದೊಂದಿಗೆ ವಾಪಸ್ಸ ಬಂದಿರುತ್ತದೆ.

ನಂತರ ಫಿರ್ಯಾದಿದಾರರ ಸಂಘವು ದಿನಾಂಕಃ 14/12/2024 ರಂದು ತಮ್ಮ ವಕೀಲರ ಮೂಲಕ

ನೋಟಸ್‌ನ್ನು ನಿಮಗೆ ನೀಡಿದ್ದು, ನೀವು ಅದನ್ನು ಸ್ವೀಕರಿಸದೆ ಸದ್ರಿ ನೋಟಿಸ್ ದಿಃ 24/12/2024 ರಂದು ಫಿರ್ಯಾದಿ ವಕೀಲರಿಗೆ ವಾಪಸ್ಸು ಬಂದಿರುತ್ತದೆ, ಆದರೂ ಹಣವನ್ನು ಮರು ಪಾವತಿಸದೆ ಆ ಮೂಲಕ ನೀವು ನೆಗೋಶಿಯೆಬಲ್ ಇನ್ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ – ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ –

ಪ್ರಶ್ನೆ – ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ –

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿಃ 10-10-2025

ಸಿವಿಲ್ ಜಡ್ಜ ಮತ್ತು ಪ್ರ. ದ. ನ್ಯಾಯಿಕ ದಂಡಾಧಿಕಾರಿ,
ಮುಂಡಗೋಡ